ಅ) ಇಲ್ಲಿಯವರೆಗೂ ಬಿಡುಗಡೆಯಾಗಿರುವ ಹಣ ರೂ.15.47 ಕೋಟಿಗಳು. ಯೋಜನೆಗೆ ವೆಚ್ಚಮಾಡಿರುವ ಹಣ: ರೂ. 16.76 ಕೋಟಿಗಳು

ಆ) ಪರಿಶೀಲಿಸಲಾಗುವುದು.

ಕಾರಂಜಾ ನೀರಾವರಿ ಯೋಜನೆ

194 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರಂಜಾ ನೀರಾವರಿ ಯೋಜನೆಗೆ ತಗಲುವ ವೆಚ್ಚ ಎಷ್ಟು? ಈವರೆಗೆ ಖರ್ಚು ಮಾಡಿರುವ ಹಣವೆಷ್ಟು? ಈ ಯೋಜನೆಯಿಂದ ಎಷ್ಟು ಎಕರೆ ನೀರಾವರಿಗೆ ಒಳಪಟ್ಟಿದೆ?

ಆ) ಮುಖ್ಯಮಂತ್ರಿಯವರು ಬೀದರ್ ಜಿಲ್ಲೆಗೆ ಇತ್ತೀಚೆಗೆ ಭೇಟಿ ನೀಡಿದಾಗ ಈ ಯೋಜನೆಗೆ 50 ಕೋಟಿ ನೀಡುವ ಬಗ್ಗೆ ಆಶ್ವಾಸನೆಯನ್ನು ನೀಡಿರುವುದು ನಿಜವೇ? ಹಾಗಿದ್ದಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು?

ಇ) ವರ್ಷದಲ್ಲಿ ಈ ಯೋಜನೆಗಾಗಿ ಎಷ್ಟು ಹಣ ಮಂಜೂರು ಮಾಡಲಾಗಿದೆ ಮತ್ತು ಎಷ್ಟು ವೆಚ್ಚ ಮಾಡಲಾಗಿದೆ (ತಿಂಗಳುವಾರು ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಯೋಜನೆಗೆ ತಗಲುವ ವೆಚ್ಚ ರೂ. 250.00 ಕೋಟಿಗಳು. ಈವರೆಗೆ ಖರ್ಚು ಮಾಡಿದ ಹಣ (7:94ರವರೆಗೆ) ರೂ. 111.54 ಕೋಟಿಗಳು. ನೀರಾವರಿಗೆ ಒಳಪಡುವ ಪ್ರದೇಶ : 35,614 ಹೆಕ್ಟೇರುಗಳು. ಮಾರ್ಚ್ 94ರವರೆಗೆ 6075 ಹೆಕ್ಟೇರುಗಳು ನೀರಾವರಿಗೆ ಒಳಪಟ್ಟಿರುತ್ತದೆ.

ಆ) ಹೌದು ರೂ. 167.37 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ವರ್ಷ ಕಾರಂಜಾ ಯೋಜನೆಗಾಗಿ ರೂ. 30 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಮತ್ತು ಏಪ್ರಿಲ್ 94ರಿಂದ ಜುಲೈ 94ರವರೆಗೆ ಆಗಿರುವ ವೆಚ್ಚದ ವಿವರಗಳು ಈ ಕೆಳಗಿನಂತಿವೆ.

1) ಏಪ್ರಿಲ್ - 94	.... ರೂ.	31.52 ಲಕ್ಷ
2) ಮೇ - 94	... ರೂ.	23.40 ಲಕ್ಷ
3) ಜೂನ್ - 94	.... ರೂ.	44.59 ಲಕ್ಷ
4) ಜುಲೈ - 94	.... ರೂ.	67.86 ಲಕ್ಷ
ಒಟ್ಟು	**.... ರೂ.**	**167.37 ಲಕ್ಷ**

ಕುಡುಪಲಿ ಬ್ಯಾರೇಜ್ ಕಾಮಗಾರಿ ಕಾರ್ಯ

339- ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕುಮದ್ವತಿ ನದಿಗೆ ಕುಡುಪಲಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ನೀಡಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಕಾರ್ಯಗತ ಮಾಡಲು ಬೇಕಾಗುವ ಅಂದಾಜು ಮೊತ್ತವೆಷ್ಟು? 94-95ರ ಆಯವ್ಯಯದಲ್ಲಿ ಒದಗಿಸಿರುವ ಹಣ. ಎಷ್ಟು?